ಅದಾಗಿಲ್ಲ... ಇದಾಗಿಲ್ಲ... ಅಂತ ತಿರುಗಿಸುತ್ತಿದ್ದು, ಒಮ್ಮೆ ಕೊಡಿಸುವ ಸಾಲಕ್ಕೆ ಪರ್ಸೆಂಟೇಜ್ ಕೇಳುತ್ತಿದ್ದುದಾಗಿ ತಿಳಿಯಿತು. ರೈತನಿಗೆ 'ನಿನ್ನ ಎಲ್ಲಾ ದಾಖಲೆ ಪತ್ರಗಳನ್ನು ಕೇಳು, ಕೊಡದಿದ್ದರೆ ನೇರ ಸಾಹೇಬರನ್ನು ಕಂಡು ಎಲ್ಲಾ ಹೇಳು, ನಿನ್ನ ಕೆಲಸ ಗ್ಯಾರಂಟಿ ಆಯ್ತದೆ' ಅಂದೆ. ಆ ರೈತ 'ಅವರು ಅಂಗೇಳ್ತಾವರೆ, ನೀವು ಮಾಡಕಾಗದಿದ್ದರೆ ನಾನು ಕೊಟ್ಟಿರೋ ನನ್ನ ಕಾಗದ ಪತ್ರ ವಾಪಸ್ಸು ಕೊಡಿ' ಅಂದಿದ್ದಾನೆ. ಯಾರೂ ಇಲ್ಲದಾಗ ಶಂಕರಪ್ಪ ನನ್ನ ಬಳಿ ಬಂದು 'ನಿಮಗೆ ತಿನ್ನಕೆ ತಾಕತ್ತಿಲ್ಲದ ಮೇಲೆ ಸುಮ್ಮನಿರ್ರೀ, ತಿನ್ನೋರ್ನ ನೋಡಿ ಯಾಕೆ ಹೊಟ್ಟೆ ಉರಕೋತೀರಿ' ಅನ್ನುವುದೆ? 'ಶಂಕ್ರಪ್ಪಾ, ನೀವೂ ರೈತನ ಮಗನಾಗಿ ರೈತರನ್ನ ಹಿಂಸೆ ಮಾಡೋದು ಒಳ್ಳೇದಲ್ಲಾ... ಹುಷಾರಾಗಿರ್ರಿ' ಅಂದೆ. ಹಂಗೇ ನನ್ನ ಮುಖ ನೋಡುತ್ತಾ ನಿಂತಿದ್ದು ಹೊರಟು ಹೋದ.

ಅಟೆಂಡರ್ ಆಗಾಗ ಶಂಕರಪ್ಪನ ಕಡೆ ತೋರಿಸಿ ಈವತ್ತು ಬಿ.ಕೆ. ಈವತ್ತು ಬಿ.ಕೆ. ಅನ್ನುತಿದ್ದು ಬಹುದಿನ ನನಗೆ ಗೊತ್ತಾಗಲಿಲ್ಲ ಒಂದು ದಿನ ರಂಗಪ್ಪನೇ ಹೇಳಿದ– ನಮ್ಮ ಆಫೀಸಿನ ಸ್ವಲ್ಪ ದೂರಕ್ಕಿದ್ದ ಕಲ್ಯಾಣ ಮಂಟಪದಲ್ಲಿ ಯಾವುದಾದರೂ ಯಾರದಾದರೂ ಮದುವೆ ಇನ್ನಿತರ ಸಮಾರಂಭ ಇದ್ದರೆ, ಅಲ್ಲಿ ಯಾರ್‍ಯಾರಿಗೆ ಯಾವ್ಯಾವ ಸಂಬಂಧ ಹೇಳುತ್ತಿದ್ದನೋ ಅಂತೂ ಊಟ ತಿಂಡಿ ತಿಂದು ಬರುತ್ತಿದ್ದ– ತಾಂಬೂಲ ಸಹಿತ.

ಒಂದು ಸಂಜೆ ಮೂರು ಬಂಡಲ್ ನ್ಯೂಸ್ ಪೇಪರನ್ನು ಸೈಕಲ್ ಮೇಲೆ ಕಟ್ಟಿಕೊಂಡು ಹೋಗುತ್ತಿದ್ದ ಶಂಕರಪ್ಪ. ಅವನು ನ್ಯೂಸ್ ಪೇಪರ್ ಕೊಳ್ಳುತ್ತಿರಲಿಲ್ಲ. ಹಾಗಾಗಿ ನನಗೆ ಕುತೂಹಲವಾಯ್ತು. ಆಫೀಸಿಗೆ ಬರುವ ಅವರಿವರ ಕೈಲಿರುವ ನ್ಯೂಸ್ ಪೇಪರ್‌ಗಾಗಿ ನಿಮ್ಮದು ಓದಿ ಆಯ್ತಾ, ನಿಮ್ಮದು ಓದಿ ಆಯ್ತಾ ಒಂದೇ ನಿಮಿಷ ಅಂತ ಕಾಡುತ್ತಿದ್ದುದು ನೆನಪಾಯಿತು. ಅವನ ಹಿಂದೆ ಹಾಗೇ ಹೋದೆ. ಬೇರೆ ಬೇರೆ ಆಕಾರದ ಪೇಪರ್‌ಗಳು ಆಫೀಸಿನ ಸೀಲು ಇರುವ ಪತ್ರಿಕೆಯೊಂದು ಕಂಡಿತು. ಒಂದು ಗಲ್ಲಿಯಲ್ಲಿ ಹಳೇ ಕಬ್ಬಿಣ, ಪೇಪರ್ ಕೊಳ್ಳುವ ಅಂಗಡಿಯಲ್ಲಿ ತೂಕ ಹಾಕುತಿದ್ದವನೇ ನನ್ನ ಮುಖ ನೋಡಿ 'ಬನ್ನಿ ಕಾಫಿ ಕುಡಿಯೋನ...' ಅಂದ. 'ಬೇಡ' ಅಂತ ಹೇಳಿ ಬಂದೆ.

ಪ್ರತೀವಾರವೂ ಆಫೀಸಿನ ಒಂದಿಲ್ಲಾ ಒಂದು ಬಲ್ಬು ಬರ್ನ್ ಆಗುತಿದ್ದವು. ಈ ಕುರಿತು ಕೆ.ಇ.ಬಿ.ಯವರನ್ನೂ ಕೇಳಿಯಾಯಿತು. ಯಾವುದೇ ತೊಂದರೆ ಇಲ್ಲವೆಂದರು. ನೈಟ್ ವಾಚ್‌ಮನ್ ಹಾಗೇ ಗಮನಿಸುತಿದ್ದವನಿಗೆ ಒಂದು ಸತ್ಯ ಗೊತ್ತಾಯಿತು. ಅದೇಂದರೆ, ಆಫೀಸಿಗೆ ತಂದು ಹಾಕಿದ್ದ ಬಲ್ಬುಗಳೇ ಬೇರೆ, ಇಲ್ಲಿ ಬರ್ನ್ ಆಗುತಿದ್ದ ಬಲ್ಬುಗಳೇ ಬೇರೆ! ವಾಚ್‌ಮನ್‌ನನ್ನು 'ನನಗೆ ಜಾಸ್ತಿ ಕೆಲಸ ಇದೆ, ನೀನು ಊಟ ಮಾಡಿ ಬಾ' ಎಂದು ಹೇಳಿ ಶಂಕರಪ್ಪ ಚೆನ್ನಾಗಿರುವ ಬಲ್ಬು ಬಿಚ್ಚಿ ತಾನು ತಂದಿದ್ದನ್ನು ಹಾಕಿ ಸುಮ್ಮನಾಗುತ್ತಿದ್ದ. ಕನಿಷ್ಠ ತಿಂಗಳಲ್ಲಿ ಎರಡು ಬಲ್ಬುಗಳು ಬರ್ನ್ ಆಗುತ್ತಿದ್ದವು. ಆವತ್ತು ರಾತ್ರಿ ಕಾವಲಿದ್ದ ಕೃಷ್ಣಯ್ಯ ಇದರ ಮೂಲವನ್ನು ಕಂಡು ಹಿಡಿದು, ಇವನು ಬಲ್ಬು ಬಿಚ್ಚುತ್ತಿದ್ದಾಗ ಹಿಡಿದು ಬಾಸ್‌ಗೆ ವರದಿ ಮಾಡಿದ. ಅವರು ಶಂಕರಪ್ಪನನ್ನು ಕರೆದು ಇನ್ನು ಮುಂದೆ ಇಂತಹ ಚಿಲ್ಲರೆ ಕೆಲಸ ಆಫೀಸಿನಲ್ಲಿ ನಡೆದರೆ ಅದಕ್ಕೆ ನೀನೇ ಹೊಣೆ ಎಂದು ಎಚ್ಚರಿಸಿದ್ದರು.

ಒಂದು ದಿನ ಆಫೀಸಿನಿಂದ ಮನೆಗೆ ಬರುವಾಗ ಶಾಮಲ ಥಿಯೇಟರ್‌ನ ನನ್ನ ಸ್ನೇಹಿತ ದಿನೇಶ್ ದಾರಿಯಲ್ಲಿ ಸಿಕ್ಕಿ ಮಾಮೂಲಾಗಿ ಥಿಯೇಟರ್‌ಗೆ ಕರೆದ. ಶಂಕರಪ್ಪ ಅದೆಲ್ಲಿದ್ದನೋ ಬರ್‍ರನೆ ನಮ್ಮ ಹತ್ತಿರ ಬಂದು ದಿನೇಶ್‌ಗೆ 'ನಾವೆಲ್ಲಾ ಒಟ್ಟಿಗೆ ಕೆಲಸ ಮಾಡ್ತೇವೆ...' ಅಂತ ಪರಿಚಯ ಮಾಡಿಕೊಂಡ. ಹಾಗೇ ಮಾತಾಡುತ್ತಾ ಥಿಯೇಟರ್‌ಗೆ ಹೋದೆವು. ದಿನೇಶ್ ಕಾಫಿ ತರಿಸಿದ. ಕುಡಿದು ಸ್ವಲ್ಪ ಹೊತ್ತು ಸಿನಿಮಾ ನೋಡಿ ಮನೆಗೆ ಬಂದೆವು. ಈತ ಇದೇ ಸಂದರ್ಭವನ್ನು ನೆಪ ಮಾಡಿಕೊಂಡು ನನ್ನ ಸ್ನೇಹಿತನ ಹತ್ತಿರ ಆಫೀಸರ್ ಪೋಜುಕೊಡುತ್ತಾ ಬೇಕಾದಾಗಲೆಲ್ಲಾ ಟಿಕೆಟ್ ತೆಗೆಯದೆ 'ಟ್ರಿಂ' ಆಗಿ ಸಿನಿಮಾಕ್ಕೆ ಹೋಗಲು ಶುರು ಮಾಡಿದನಂತೆ. ದಿನೇಶ್ ಮತ್ತು ಗೇಟ್ ಕೀಪರ್‌ಗಳು ನನ್ನನ್ನು ನೆನೆದು ಸುಮ್ಮನಿದ್ದರು. ಇದು ನನಗೆ ಗೊತ್ತಾಯಿತು. ಈಗ ಶಂಕರಪ್ಪನ ಮೇಲೆ ಸಿಟ್ಟು ಬಂತು. ಥಿಯೇಟರ್ ಹುಡುಗರಿಗೆ ಅವನನ್ನು ಹಾಗೆ ಒಳ ಬಿಡಬೇಡೀಂದೆ. ಆ ಹುಡುಗರು ಕೇಳಬೇಕೆ? ಟಾಯ್ಲೆಟ್‌ನಲ್ಲಿ ಸುಮಾರು ಹೊತ್ತು ಕೂಡಿಹಾಕಿದ್ದರು– ಅಂತ ಕೇಳಿ ತೀರಾ ಬೇಸರವಾಯಿತು.

* * *

ಆಫೀಸನ್ನೇ ತಲೆಮೇಲೆ ಹೊತ್ತುಕೊಂಡಿರುವವನ ಥರಾ ಪೋಜು ಕೊಟ್ಟುಕೊಂಡು ಓಡಾಡುತ್ತಿದ್ದವ ಈವತ್ತು ಸೋಮವಾರ ಹನ್ನೊಂದಾದರೂ ಅವನ ಸುಳಿವಿಲ್ಲ. ರಜೆಯೂ ಇಲ್ಲ. ಬಾಸ್ ನಾಲ್ಕಾರು ಸಾರಿ ಕೇಳಿದರು. ಆಫೀಸಿನ ಎದುರು ಮನೆಯ ರುದ್ರಣ್ಣ ಮತ್ತು ಅವನ ತಮ್ಮಂದಿರು ದಿನಾ ಕೆಲಸಕ್ಕೆ ಹೊರಟು ಹೋಗುತ್ತಿದ್ದವರು ಈವತ್ತು ಆಫೀಸಿನ ಕಡೆ ನೋಡುತ್ತಾ ಸೊಂಟದ ಮೇಲೆ ಕೈ ಇಟ್ಟುಕೊಂಡು ನಿಂತಿದ್ದರು.

ನಮ್ಮ ಆಫೀಸಿನ ಕಿಟಕಿಯಿಂದ ನೋಡಿದರೇ ಸಾಕು ರುದ್ರಣ್ಣನ ಮನೆಯ ಆಗಂತವೆಲ್ಲಾ ಕಾಣುತ್ತಿತ್ತು. ರುದ್ರಣ್ಣ ಅವನ ತಮ್ಮಂದಿರು ಆಫೀಸಿನ ಕಡೆ ಕೈ ತೋರಿಸಿಕೊಂಡು ಏನೇನೋ ಮಾತಾಡಿಕೊಳ್ಳುತ್ತಿದ್ದರು. ಏನೋ ನಡೆದಿದೆ ಅನ್ನುವುದನ್ನು ಸುಲಭವಾಗಿ ಊಹಿಸಬಹುದಿತ್ತು. ಯಾರನ್ನು ಕೇಳಿದರೂ ಏನೋ ಗೊತ್ತಿಲ್ಲ ಅನ್ನುತ್ತಿದ್ದರು. ಬಾಸ್ ಕೇಳಿದರೆ ಗೊತ್ತಾಗಬಹುದೂಂತ ಅವರನ್ನೇ ಕೇಳಿದೆ. 'ಆ ಅಯೋಗ್ಯನ್ನ ನಾನು ಬೆಳೆಯಲು ಬಿಟ್ಟದ್ದೇ ತಪ್ಪಾಯ್ತು, ಏನೂಂತ ಹೇಳಲೀ ರೀ...' ಅಂದು ತಲೆಗೆ ಕೈ ಕೊಟ್ಟರು. ಇಂಥವರನ್ನೆಲ್ಲಾ ಜವಾನ ಅಟೆಂಡರ್‌ರಂತವರನ್ನು ಕೇಳಿದರೆ ಅವರು ಸೂಕ್ತ ಮಾಹಿತಿ ನೀಡುತ್ತಾರೆನಿಸಿ ಅಟೆಂಡರ್ ರಂಗಪ್ಪನ್ನ ಕೇಳಿದೆ. 'ಬನ್ನಿ ಬುದ್ಧಿ' ಅಂತ ಆತ ನಮ್ಮ ಆಫೀಸಿನ ಹಿಂಭಾಗದಲ್ಲಿದ್ದ ತನ್ನ ಮನೆಗೆ ಕರೆದುಕೊಂಡು ಹೋದ. ಅವನ ಮಕ್ಕಳೆಲ್ಲಾ ಶಾಲೆಗೆ ಹೋಗಿದ್ದವು. ರಂಗಪ್ಪ ತನ್ನ ಹೆಂಡತಿಯನ್ನು ಕರೆದು ನೆನ್ನೆ ನಡೆದದ್ದನ್ನು ಹೇಳು ಅಂದ. ಆಕೆ ಹೇಳಿದ ಪ್ರಕಾರ ನೆನ್ನೆ ಭಾನುವಾರವಾದ್ದರಿಂದ ಅಕ್ಕಪಕ್ಕದ ಎಲ್ಲಾ ಮಕ್ಕಳೂ ಮಧ್ಯಾಹ್ನ ನಮ್ಮ ಆಫೀಸಿನ ಹಿಂಭಾಗದ ಪಾಳಿನಲ್ಲಿ ಆಟ ಆಡುತ್ತಿದ್ದವಂತೆ, ಆ ಮಕ್ಕಳ ಪೈಕಿ ರುದ್ರಣ್ಣನ ಕಡೆಯ ತಂಗಿ ಐದನೇ ಕ್ಲಾಸಿಗೆ ಹೋಗುತ್ತಿದ್ದ ಹುಡುಗಿಯೂ ಆಟ ಆಡುತ್ತಿದ್ದಳಂತೆ, ಶಂಕರಪ್ಪ ಆಫೀಸಿನಲ್ಲಿ ಯಾವುದೋ ಪೆಂಡಿಂಗ್ ಕೆಲಸ ಮುಗಿಸುವಂತೆ ಬಂದು ಹುಡುಗರನ್ನೆಲ್ಲಾ ಕಾಸು ಕೊಟ್ಟು ತಿಂಡಿ ತರುವಂತೆ ಹೇಳಿ ಕಳಿಸಿದ್ದಾನೆ, ರುದ್ರಣ್ಣನ ತಂಗಿಗೆ ಅದೇನು ಆಸೆ ತೋರಿಸಿದನೋ ಆಫೀಸಿನ ಹಿಂದೆ ಇರುವ ಸ್ಟೋರ್ ರೂಮಿಗೆ ಕರೆದುಕೊಂಡು ಹೋಗಿದ್ದಾನೆ, ತಿಂಡಿ ತಂದ ಮಕ್ಕಳು ಮತ್ತೇ ಬಂದು ನೋಡಿದರೆ ಆ ಹುಡುಗಿ ಇಲ್ಲ! ಸ್ಟೋರ್ ರೂಮಿಂದ ಆ ಹುಡುಗಿ ಕೂಗುತ್ತಿದ್ದಳಂತೆ, ಈ ಮಕ್ಕಳೆಲ್ಲಾ ದಿಗಿಲಾಗಿ ಕಿರಚಿಕೊಂಡಿವೆ. ಅಕ್ಕಪಕ್ಕದ ನಾಲ್ಕಾರು ಹೆಂಗಸರು ಅಲ್ಲಿ ಬಂದು ಮಕ್ಕಳನ್ನು ಕೇಳಿದ್ದಾರೆ, ಮಕ್ಕಳು ಸ್ಟೋರ್ ರೂಮಿನ ಕಡೆ ತೋರಿಸಿವೆ, ಹೆಂಗಸರು ಕಿಟಕಿಯಲ್ಲಿ ನೋಡಿದ್ದಾರೆ– ಶಂಕರಪ್ಪ ಆ ಹುಡುಗಿಯ ಮೇಲೆ ಹೊರಳಾಡ್ತಾ ಇದ್ದನಂತೆ. ರಂಗಪ್ಪನ ಹೆಂಡತಿ ಬಾಗಿಲು ಬಡಿದ ಮೇಲೆ ಎಷ್ಟೋ ಹೊತ್ತಿಗೆ ಆ ಹುಡುಗಿಯೇ ಬಂದು ಬಾಗಿಲು ತೆಗೆದು 'ಆಂಟೀ ಆಂಟೀ' ಅಂತ ಅಳುತ್ತಾ ಈಕೆಯನ್ನು ತಬ್ಬಿಕೊಂಡಳಂತೆ, ಇವನ ಪುಣ್ಯಕ್ಕೆ ಯಾರೂ ಗಂಡಸರಿರಲಿಲ್ಲ. ಆಗ ಮೂರು ನಾಲ್ಕು ಹೆಂಗಸರೇ ಹಿಡಕೊಂಡು ಅಡಾತೀಡಾ ಬಡಿದರಂತೆ. ಕಡೆಗೆ ಅವರ ಮನೆ ಗಲ್ಲಿಯ ಎಲೆಕ್ಟ್ರಿಕ್ ಕಂಬಕ್ಕೆ ಕಟ್ಟಿದ್ದರಂತೆ, ರಂಗಪ್ಪ ಎಲ್ಲಾದರೂ ಹಾಳಾಗಿ ಹೋಗಲು ಹೇಳಿ, ಇನ್ನು ಆಫೀಸಿನ ಕಡೆ ಬರಬೇಡ. ರುದ್ರಣ್ಣನವರ ಮನೆಯ ಯಾರಿಗೂ ಮುಖ ತೋರಿಸದ ಹಾಗೆ ಹೋಗಲು ಹೇಳಿ ಕಳಿಸಿದ್ದನಂತೆ. ಯಾವತ್ತೂ ತಪ್ಪಿದ್ದಲ್ಲ ಸಾರ್ ನೆನ್ನೆಯಿಂದ ಅವನ್ನ ಹುಡಕ್ತಾವರೆ ಅಂದಳು.

ನನಗೇ ಅರಿಯದೆ ನನ್ನ ಮುಷ್ಟಿ ಬಿಗಿಯಾದವು. ಹಲ್ಲು ಕಟಗರಿದವು ಆ ಅಯೋಗ್ಯನ್ನ ಕತ್ತರಿಸಿಹಾಕಬೇಕು. ಅವನ್ನ ಸುಟ್ಟು ಆ ಬೂದಿಯನ್ನ ಆ ಹುಡುಗಿ ಕಾಲಿಗೆ ಇಡಬೇಕು ಏನೇನೋ ಯೋಚನೆಗಳು ಅಮರಿಕೊಂಡವು.

ಕೆಲಸ ಮಾಡಲು ಮನಸ್ಸಾಗುತ್ತಿಲ್ಲ. ತೀರಾ ಆತಂಕ, ಹಿಂಸೆ ಏನೇನೋ ಅನಿಸುತಿತ್ತು.

* * *

ಸುಮಾರು ಮೂರು ಗಂಟೆಯ ಸಮಯಕ್ಕೆ ಇಬ್ಬರು ದಾಂಡಿಗರ ಜೊತೆಯಲ್ಲಿ ಆಕಡೆ ಈಕಡೆ ನೋಡುತ್ತಾ ಶಂಕರ ಏನೂ ನಡೆದಿಲ್ಲವೇನೊ ಅನ್ನುವ ಥರ ದಡದಡನೆ ಆಫೀಸಿಗೆ ಬಂದ. ಬಾಸ್ ಇರಲಿಲ್ಲ, ನಮ್ಮ ಸ್ಟ್ಯಾಫ್‌ನವರೆಲ್ಲಾ ಆಚೆ ಹೋಗಿ ನೋಡುತ್ತಿದ್ದರು, ವಾತಾವರಣ ಯಾವ ತಿರುವು ಪಡೆದರೂ ಆಶ್ಚರ್ಯ ಇಲ್ಲ, ಶಂಕರ ಮುಖದಲ್ಲಿ ಮೊಂಡ ಧೈರ್ಯ ಇತ್ತು.

'ಏ ಶಂಕ್ರಾ ನಿನ್ನ ಹತ್ತಿರ ಸ್ವಲ್ಪ ಮಾತಾಡಬೇಕು. ನಿನ್ನ ರೂಮಿಗೆ ಹೋಗೋಣ ನಡಿ' ಅಂತ ಎದ್ದೆ. ಏನೂಂತ ಕೇಳದೆ ಈಚೆ ಬಂದು ಬಾಗಿಲಲ್ಲಿ ಆಕಡೆ ಈಕಡೆ ನೋಡಿ ದಡ ದಡನೆ ಹೊರಟ. ನನ್ನ ಮೈ ಕೋಪದಿಂದ ಥರಥರಾನ್ನುತ್ತಿತ್ತು, ಅವನು ಬೀಗ ತೆಗೆದ ತಕ್ಷಣ ಅವನನ್ನು ಒಳಕ್ಕೆ ತಳ್ಳಿ 'ಏನೊ ನಾಯಿ... ನಿನಗೆ ಅಮ್ಮ ಅಕ್ಕ ತಂಗೀರು ಯಾರೂ ಇಲ್ವ. ಬೇಕಾದ್ರೆ ಯಾವೋಳ್ನಾದ್ರೂ ಕಟ್ಕಬೇಕು. ಆ ಏನೂ ಅರಿಯದ ಹುಡುಗಿಗೆ ಹಂಗೇನೋ ಮಾಡದು' ಅಂತ ಕೆನ್ನೆಗೆ ಬಾರಿಸಿದೆ. ಸಿಕ್ಕಿಬಿದ್ದ ಕಳ್ಳನ ಹಾಗೆ ಸುಮ್ಮನೆ ನಿಂತಿದ್ದ. 'ನಿನ್ನಂಥವರನ್ನ ಉಳಿಸೋದು ಊರಿಗೆ ಒಳ್ಳೇದಲ್ಲ' ಅಂತ ಅವನ ಕುತ್ತಿಗೆ ಹಿಡಿದೆ ಹಿಡಿದೆ ಕುತ್ತಿಗೆ ಒತ್ತುತ್ತಾ ಹಿಡಿತ ಬಿಗಿಯಾಗಿ ಅವನ ಮುಖದ ಹತ್ತಿರ ಮುಖ ತಂದಾಗ ಅವನ ಕಣ್ಣ ಕಪ್ಪು ಗುಡ್ಡೆಗಳಲ್ಲಿ ಬೆಂಕಿಯ ಜ್ವಾಲೆ ಕಾಣಿಸಿತು! ಆ ಕಪ್ಪು ಗುಡ್ಡೆಯಲ್ಲಿ ಒಂದು ಮನೆಯೇ ಹೊತ್ತಿ ಉರಿದು ಬೆಂದು ಭಸ್ಮವಾಗಿ ಬೀಳುತ್ತಿರುವುದು ಕಾಣಿಸಿತು!

'ಥೂ ಪಾಪಿ ಎಲ್ಲಾದರೂ ಸಾಯಿ' ಅಂತ ದೂರ ತಳ್ಳಿ ಬಾಗಿಲಕಡೆ ತಿರುಗಿದೆ, ಬಾಗಿಲಲ್ಲಿ ಆವಾಗಲೇ ಶಂಕ್ರನ ಹಿಂದೆ ಬಂದ ದಾಂಡಿಗರು ಸೊಂಟದ ಮೇಲೆ ಕೈಯಿಟ್ಟು ಬಾಗಿಲಿಗೆ ಅಡ್ಡವಾಗಿ ನನ್ನನ್ನ ದುರು ದುರು ನೋಡುತ್ತಾ ನಿಂತಿದ್ದರು.